(ಇಂದು ದಿನಾಂಕ:14-08-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ ಎಸ್ ಎನ್ ಎಮ್ ಎದುರುದಾರರ ಪರ ವಕೀಲರಿಂದ.**

1. ನನ್ನ ಗಂಡನಿಗೆ 50 ವರ್ಷ ವಯಸ್ಸು ಎಂದರೆ ಸರಿ. ಪಡಿತರ ಚೀಟಿ ಪ್ರಕಾರ ನನ್ನ ಗಂಡನಿಗೆ 52 ವರ್ಷ ವಯಸ್ಸು ಇತ್ತು ಎಂದರೆ ಸರಿ. ದಿಃ 04-12-2023 ರಂದು ಅಪಘಾತವಾಗಿರುತ್ತದೆ. ನಿಪಿ-2 ರ ಪ್ರಕಾರ ಅಪಘಾತವು ದಿಃ 05-12-2023 ರಂದು ಆಗಿರುತ್ತದೆ ಎಂದರೆ ಸರಿಯಲ್ಲ. ದೂರನ್ನು ನಾನೇ ಮುದಗಲ್ಲ ಪೋ.ಠಾಣೆಯಲ್ಲಿ ಕೊಟ್ಟಿರುತ್ತೇನೆ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ದೂರಿನಲ್ಲಿ ಯಾವ ವಾಹನ, ಅದರ ಸಂಖ್ಯೆ ಮತ್ತು ಯಾವ ಚಾಲಕನಿಂದ ಅಪಘಾತವಾಗಿರುತ್ತದೆ ಎಂದು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಾಗಲಾಪೂರ ಪಂಚಾಯತಿಯ ಸಿಸಿ ಕ್ಯಾಮಾರಾವನ್ನು ವೆಂಕನಗೌಡ, ಮಾಲನಗೌಡ, ಹನಮಂತ, ದುರ್ಗಪ್ಪ ಮತ್ತು ಬಸವರಾಜ ಎಲ್ಲರೂ ಸೇರಿ ಸಿಸಿ ಟಿವಿ ದೃಶ್ಯಾವಳಿಯನ್ನು ನೋಡಿರುತ್ತೇವೆ. ಗ್ರಾಮ ಪಂಚಾಯತಿ ರಸ್ತೆಯಿಂದ ಹತ್ತಿರ ಇರುತ್ತದೆ. ಸಿಸಿ ಟಿವಿ ದೃಶ್ಯಾವಳಿಯನ್ನು ನಾನು ದೂರು ಕೊಡುವ ಪೂರ್ವದಲ್ಲಿ ನೋಡಿರುತ್ತೇನೆ. ನಾನು ಡಿಕ್ಕಿಪಡಿಸಿದ ವಾಹನದ ಚಾಲಕನ ಹೆಸರು ಮತ್ತು ವಾಹನದ ಸಂಖ್ಯೆ ದೂರಿನಲ್ಲಿ ನಾನು ಉಲ್ಲೇಖಿಸಿಲ್ಲ ಎಂದರೆ ಸರಿಯಲ್ಲ.
2. ಕುಷ್ಟಗಿ ಪಟ್ಟಣದ ಕುಮಾರ ಇವರು ಮಿನಿ ಲಾರಿ ಚಾಲಕ. ಕುಷ್ಟಗಿ ಪಟ್ಟಣದ ಕುಮಾರರವರ ಬಗ್ಗೆ ನಾಗಲಾಪೂರದ ಸೋಮನಾಥ ಹೇಳಿದ್ದಾರೆ. ನಾನು ಪೋಲೀಸರ ಜೊತೆ ಶಾಮಿಲಾಗಿ ಲಾರಿ ನಂ. ಕೆಎ 37 ಬಿ 5471 ನೇದ್ದನ್ನು ದೂರಿನಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ಸದರಿ ಲಾರಿಯಿಂದ ಆಗಿರುವುದಿಲ್ಲ ಬೇರೆ ವಾಹನದಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಲಾರಿ ಮಾಲೀಕರು ನನಗೆ ಮೊದಲೇ ಪರಿಚಯ ಆಗಿದ್ದು, ಅವರ ಜೊತೆ ಶಾಮಿಲಾಗಿ ನಾನು ಸುಳ್ಳು ಅಂಶವುಳ್ಳ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ಗಂಡ ಮೃತ ಹುಚ್ಚಪ್ಪ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಕಾರಣ ಸದರಿ ಮಿನಿ ಲಾರಿ ವಾಹನ ಸಂಖ್ಯೆ ನನಗೆ ಅವರು ಹೇಳಿಲ್ಲ. ಅಪಘಾತದ ನಂತರ ನಾನು ನನ್ನ ಗಂಡ ಮೃತ ಹುಚ್ಚಪ್ಪ ರವರನ್ನು ಸರ್ಕಾರಿ ಆಸ್ಪತ್ರೆ ಲಿಂಗಸೂರಿಗೆ ಕರೆದುಕೊಂಡು ಹೋಗಿದ್ದೆ ನಂತರ ರಾಯಚೂರು ರಿಮ್ಸ್ ಆಸ್ಪತ್ರೆಯಲ್ಲಿ 20 ದಿನಗಳವರೆಗೆ ನನ್ನ ಗಂಡ ಮೃತ ಹುಚ್ಚಪ್ಪ ರವರಿಗೆ ದಾಖಲಿಸಿರುತ್ತೇವೆ. ಲಿಂಗಸಗೂರಿನ ಆಸ್ಪತ್ರೆಯಲ್ಲಿ ನನ್ನ ಗಂಡ ಮೃತ ಹುಚ್ಚಪ್ಪನಿಗೆ ಚಿಕಿತ್ಸೆ ಕೊಡಲಿಲ್ಲ, ಏಕೆಂದರೆ ಪರಿಸ್ಥಿತಿ ಗಂಭೀರ ಇತ್ತು. ರಿಮ್ಸ್ ಆಸ್ಪತ್ರೆ ರಾಯಚೂರಿಗೆ ಪೋಲೀಸರು ಬಂದಿದ್ದರು, ಆದರೆ ನನ್ನ ಗಂಡ ಮೃತ ಹುಚ್ಚಪ್ಪರವರು ಅಪಘಾತಪಡಿಸಿದ ವಾಹನದ ಬಗ್ಗೆ ಹೇಳಿಲ್ಲ ಏಕೆಂದರೆ ಅವರು ಅಲ್ಲಿಯೂ ಕೂಡಾ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ.
4. ಒಂದು ದಿನದ ನಂತರ ನಾನು ದೂರು ಸಲ್ಲಿಸಿದ್ದರಿಂದ ವಿಳಂಬದ ಲಾಭ ಪಡೆದು ನಾನು ಮಿನಿ ಲಾರಿಯನ್ನು ಪ್ರಕರಣದಲ್ಲಿ ಅಳವಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಜಪ್ತಿ ಪಂಚನಾಮೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.
5. ಶಿವಗ್ಯಾನಪ್ಪ ಮತ್ತು ಮೌನೇಶ ನನ್ನ ಮಕ್ಕಳು. ಇವರ ಆದಾಯದಿಂದ ನನ್ನ ಕುಟುಂಬ ನಡೆಯುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡ ಮೃತ ಹುಚ್ಚಪ್ಪ ರವರ ಆದಾಯದಿಂದ ಮನೆ ನಡೆಯುತ್ತಿತ್ತು ಮತ್ತು ಅವರ ಆದಾಯದ ಬಗ್ಗೆ ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮೃತ ಹುಚ್ಚಪ್ಪರವರಿಗೆ ವಯಸ್ಸಾಗಿದ್ದರಿಂದ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ನನ್ನ ಮಕ್ಕಳ ಆದಾಯದಿಂದ ಕುಟುಂಬ ನಡೆಯುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರ ನಂ.2 ಮತ್ತು 3 ಅವರ ಸ್ವಯಾರ್ಜಿತದಿಂದ ಕುಟುಂದ ನಡೆಯುತ್ತಿದ್ದು ಅವರಿಗೆ ಪರಿಹಾರ ಪಡೆಯುವ ಹಕ್ಕು ಇಲ್ಲ ಎಂದರೆ ಸರಿಯಲ್ಲ.
6. ರೂ.2 ಲಕ್ಷ ವೈದ್ಯಕೀಯ ವೆಚ್ಚದ ಬಗ್ಗೆ ನಾನು ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮೃತ ಹುಚ್ಚಪ್ಪ ರವರ ಆದಾಯದ ಮೂಲದ ಬಗ್ಗೆ ನಾನು ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮೃತ ಹುಚ್ಚಪ್ಪರವರಿಗೆ ಅರಪರಿಚಿತ ವಾಹನ

ಡಿಕ್ಕಿಪಡಿಸಿದರೂ ಕೂಡಾ ಕೆಎ 37 ಬಿ 5471 ಮಿನಿ ಲಾರಿ ಡಿಕ್ಕಿಪಡಿಸಿತು ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ಎದುರುದಾರರ ನಂ.1 ಇವರಿಗೆ ಸೂಕ್ತವಾದ ಚಾಲನಾ ಪತ್ರ ಇರುವುದಿಲ್ಲ ಹಾಗೂ ವಾಹನಕ್ಕೆ ಸಂಬಂಧಪಟ್ಟಂತೆ ಸೂಕ್ತವಾದ ದಾಖಲೆಗಳು ಇಲ್ಲದ ಕಾರಣ ಎದುರುದಾರ ನಂ.2 ಇವರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಎದುರುದಾರರ ನಂ.1 ರವರು ಮೋ.ವಾ. ಕಾಯ್ದೆ ಮತ್ತು ವಿಮಾ ಶರತ್ತುಗಳನ್ನು ಉಲ್ಲಂಘನೆ ಮಾಡಿದ ಕಾರಣ ಎದುರುದಾರ ನಂ.2 ಇವರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು